







'ಒಡವೆಗಳಲ್ಲಿ ಜುಮ್ಕಾ, ಜಡೆ ಬಿಲ್ಲೆಯನ್ನು ನೆಕ್ ಪೀಸ್ ತರವೂ ಬಳಸಬಹುದು. ಈ ರೀತಿಯ 'ಟೂ ಇನ್ ವನ್' ಸಂಗ್ರಹಕ್ಕೆ ಈಗ ಬಹಳ ಬೇಡಿಕೆಯಿದೆ. ಸಾಂಪ್ರದಾಯಿಕ ಆಭರಣಗಳಿಗೆ ಆಧುನಿಕ ಸ್ಪರ್ಶ ನೀಡುವಂಥ ಒಡವೆಗಳು ಫ್ಯಾಷನ್‌ಪ್ರಿಯರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ' ಎಂದೂ ಹೇಳುತ್ತಾರೆ ಅಶ್ವಿನಿ.

ಸೆಲೆಬ್ರಿಟಿಗಳು, ವೈದ್ಯರು, ಸಾಫ್ಟ್‌ವೇರ್ ಎಂಜಿನಿಯರರು, ಉದ್ಯಮಶೀಲತಾ ಮಹಿಳೆಯರು ಇಂಥ ಆಭರಣಗಳನ್ನು ಕೇಳಿಕೊಂಡು ಬರುತ್ತಾರೆ. ಇದರಲ್ಲಿ ಆ್ಯಂಟಿಕ್, ಸಮಕಾಲೀನ, ಆಧುನಿಕ, ಕ್ಲಾಸಿಕ್ ಮತ್ತು ಡೈಲಿ ವೇರ್ ಒಡವೆಗಳಿರುವುದರಿಂದ ಎಲ್ಲ ವರ್ಗದ ಮಹಿಳೆಯರನ್ನೂ ಸೆಳೆಯುತ್ತವೆ ಎಂಬುದು ಅಶ್ವಿನಿ ಅವರ ಹೇಳಿಕೆ.

ಆರ್ಣವ ಆಭರಣಗಳಲ್ಲಿ ವಿನ್ಯಾಸ ಸೂಕ್ಷ್ಮ ವಿವರಗಳನ್ನು ಗಮನಿಸಬಹುದು. ಸಾಂಪ್ರದಾಯಿಕ ಮತ್ತು ಸಮಕಾಲೀನ ಶೈಲಿಯ ಸಮ್ಮಿಲನ ಈ ಹೊಸ ಆಭರಣ ಸಂಗ್ರಹದಲ್ಲಿದೆ. ಅದ್ಭುತ ಕೌಶಲ್ಯ ಗಮನಸೆಳೆಯುವಂತಿದೆ.

ಹರಳುಗಳು, ಮುತ್ತುಗಳು, ಚಿನ್ನ ಮತ್ತು ಬೆಳ್ಳಿ ಎಲ್ಲವನ್ನೂ ಕಲ್ಪನೆಗೂ ನಿಲುಕದ ವಿನ್ಯಾಸಗಳಲ್ಲಿ ಕಸೂತಿ ಮಾಡಿದಂತಿದೆ. ಪಾರಂಪರಿಕ ಸಂಗ್ರಹದ ಪ್ರತಿಯೊಂದು ಆಭರಣವೂ ಸಹ ನೈಜ ಕರಕೌಶಲ್ಯದ ಫಲವಾಗಿದೆ. ಈಗಾಗಲೇ ಇರುವ ವಿನ್ಯಾಸವನ್ನೇ, ಏನೂ ಹಾನಿಯಾಗದಂತೆ ಆಭರಣಗಳಲ್ಲಿ ಹೆಚ್ಚಿನ ವಿವರಗಳನ್ನು ಸೇರಿಸುವಂತಿರುವುದರಿಂದ ಇದೊಂದು ಅಪರೂಪದ ಸಂಗ್ರಹ ಎನ್ನಬಹುದು. ಕಂಠಿ ಹಾರ, ಕಿವಿ ಓಲೆಗಳು, ಬಳೆಗಳು, ಪ್ರಾಚೀನ ಬೆಳ್ಳಿ ವಸ್ತುಗಳು, ಸಣ್ಣ ಬೆಳ್ಳಿ ಹಣೆಗೆಗಳು ಮತ್ತು ತಕ್ಕಮಟ್ಟಿಗೆ ಬೆಲೆಬಾಳುವ ಮಣಿಗಳ ಕೆಲಸ ಚಿನ್ನದ ಒಡವೆಯಲ್ಲಿ ಪಡಿಮೂಡಿದೆ.

ಮಹಿಳೆಯರಿಗೆ ಒಡವೆ ಖರೀದಿಸುವಾಗ ಫ್ಯಾಷನೆಬಲ್ ಆಗಿರುವುದನ್ನೇ ಕೊಳ್ಳುವ ತವಕ. ಚಿನ್ನ ಎಂದಿಗೂ ಆಪದ್ಧನ. ಹೀಗಾಗಿ ಹಣ ಹೂಡಿಕೆ ಬಗ್ಗೆ ಮುಂದಾಲೋಚನೆ ಇದ್ದೇ ಇರುತ್ತದೆ. ಹೆಣ್ಣು ಮಗು ಇರುವ ಮನೆಯಲ್ಲಿ ಆಭರಣಗಳ ಸಂಗ್ರಹ ಇದ್ದದ್ದೆ. ಈ ಎಲ್ಲ ಇಂಗಿತವನ್ನು ಮಡಿಲಲ್ಲಿಟ್ಟುಕೊಂಡು ಚಿನ್ನದ ಮಳಿಗೆಗಳು ಒಡವೆಗಳನ್ನು  ವೈವಿಧ್ಯಮಯ ಮತ್ತು ವಿಭಿನ್ನ ವಿನ್ಯಾಸಗಳಲ್ಲಿ ನೀಡುವತ್ತ ಪ್ರಯತ್ನ ಪಡುತ್ತಾರೆ. ಅದರಲ್ಲೂ ಆಭರಣಗಳು ಸಾಂಪ್ರದಾಯಿಕ ಮತ್ತು ಸಮಕಾಲೀನ ಎರಡೂ ಮನೋಭಾವದವರನ್ನು ಸೆಳೆಯುವಂತಿದ್ದರೆ ಅದು ಎಲ್ಲ ರೀತಿಯ ಉಡುಗೆಗಳಿಗೆ ಸರಿ ಹೊಂದುತ್ತವೆ. ಮಲ್ಟಿ ಪರ್ಪಸ್ ಆಭರಣಗಳಿಗೂ ಈಗ ಬೇಡಿಕೆ ಹೆಚ್ಚಿದೆ.

ಇನ್ನು ಕೆಲವು ಮಹಿಳೆಯರು ಹೆರಿಟೇಜ್ ಆಭರಣಗಳ ಜತೆಗೆ ವಿಕ್ಟೋರಿಯನ್ ಸಂಗ್ರಹದ ಆಭರಣಗಳನ್ನೂ ಇಷ್ಟಪಡುತ್ತಾರೆ. ಇದಕ್ಕಾಗಿ ನಿಖಾರ್, ಆಮ್ರಪಾಲಿ, ನೀಲಕಂಠ, ಆಭರಣ, ಪ್ರತಿಭಾ ಮುಂತಾದ ಆಭರಣ ಮಳಿಗೆಗಳು ಸಾಂಪ್ರದಾಯಿಕ ಆಭರಣ, ಟೆಂಪಲ್ ಆಭರಣಗಳ ಸಂಗ್ರಹದ ಕಡೆಗೆ ಹೆಚ್ಚಿನ ಒಲವು ತೋರಿಸಿ ಮಾರಾಟದತ್ತ ದೃಷ್ಟಿ ನೆಟ್ಟಿದ್ದಾರೆ. ಈ ಸಂಗ್ರಹದಲ್ಲಿ ಸರ, ಕಿವಿಯೋಲೆ, ಕಾಕ್‌ಟೇಲ್ ರಿಂಗ್‌ಗಳು, ಬೆಳ್ಳಿ ಚಿನ್ನದ ಹೊದಿಕೆಯಿರುವ ಸರಗಳು ಸಿಗುತ್ತದೆ. ಮಾಣಿಕ್ಯ, ವಜ್ರ, ಪಚ್ಚೆ ಹರಳುಗಳಿಂದ ತಯಾರಿಸಿದ ಕೆಲವು ಆಭರಣಗಳು ಗ್ರ್ಯಾಂಡ್ ಲುಕ್ ನೀಡಲು ಸಹಕಾರಿಯಾಗಿದೆ. ಇವು ಜನರ ಸಮಕಾಲೀನ ಭಾವನೆಗಳಿಗೆ ಸ್ಪಂದಿಸುವಂತಿದ್ದು ಮಹಿಳೆಯರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ. ■




ಶ್ರೀ ಪಂಚಮುಖಿ ಜ್ಯೋತಿಷ್ಯಂ

ॐ ✝ ☪ INDIA'S MOST POPULAR ASTROLOGER ॐ ✝ ☪

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

